**ದಿನಾಂಕಃ 16.12.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

ದಾವಾಸ್ವತ್ತಿನಲ್ಲಿ ವಿಭಾಗ ಕೋರಿ ದಾವೆಯನ್ನು ಹೂಡಿರುತ್ತೇನೆ. ದಾವಾಸ್ವತ್ತು 10 ಎಕರೆ 4 ಗುಂಟೆ ಇರುತ್ತದೆ. ಓ ಎಸ್ ನಂ.256/2002 ರಲ್ಲಿ ವಿಭಾಗಕ್ಕೆಂದು ದಾವೆಯನ್ನು ಹೂಡಿ ಅದು ಡಿಕ್ರಿಯೂ ಸಹ ಆಗಿರುತ್ತದೆ ಎಂದರೆ ಸರಿ. ಸದರಿ ದಾವೆಯನ್ನು ನಾನು ಮತ್ತು ಮುನಿರಾಜುರವರು ಹೂಡಿರುತ್ತೇವೆ. ನನ್ನ ತಮ್ಮನ ವಿರುದ್ದ ಹೂಡಿರುತ್ತೇನೆ. ಸ್ವತ್ತು ನಮ್ಮ ತಂದೆಯದ್ದಾಗಿರುತ್ತದೆ. ಓ ಎಸ್ ನಂ.256/2002 ರಲ್ಲಿ ಈ ದಾವೆಯ ಪ್ರತಿವಾದಿಯರನ್ನು ಅದರಲ್ಲಿ ಪಕ್ಷಗಾರರನ್ನಾಗಿ ಮಾಡಿರಲಿಲ್ಲ. ಸದರಿ ದಾವೆಯಲ್ಲಿ ಅವರನ್ನು ಪಕ್ಷಗಾರರನ್ನಾಗಿ ಮಾಡಿರುತ್ತೇನೆಂದರೆ ಸರಿಯಲ್ಲ. ಆರ್ ಎ ನಂ.10122/2016 ರಲ್ಲಿ ಈ ದಾವೆಯ ಪ್ರತಿವಾದಿಯರು ಓ ಎಸ್ ನಂ.256/2002 ರ ತೀರ್ಪಿನ ವಿರುದ್ದ ಮೇಲ್ಮನವಿ ಸಲ್ಲಿಸಿದ್ದರು ಎಂದರೆ ಸರಿ. ಮುಂದುವರೆದು ಅಪೀಲು ವಜಾಗೊಂಡಿರುತ್ತದೆ.

ಅಪೀಲು ವಜಾಗೊಂಡ ನಂತರ ಮುನಿರಾಜುರವರು 2 ಎಕರೆ 20 ಗುಂಟೆಯ ಜಾಗವನ್ನು ಪ್ರತಿವಾದಿಯರಿಗೆ ಕರಾರು ಮಾಡಿಕೊಟ್ಟಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಓ ಎಸ್ ನಂ.421/2020 ಪ್ರಕರಣವು ಈಗಲೂ ಸಹ ನಡೆಯತ್ತಿರುತ್ತದೆ ಎಂದು ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುತ್ತೇನೆಂದರೆ ಸರಿ. ನಾನು ಈ ದಾವೆಯನ್ನು ಸರ್ವೇ ನಂ.194/1 ಮತ್ತು 194/2 ರ ಒಟ್ಟು ವಿಸ್ತೀರ್ಣ 10 ಎಕರೆ 4 ಗುಂಟೆ ಜಾಗಕ್ಕೆ ಹೂಡಿರುತ್ತೇನೆಂದರೆ ಸರಿ.

ಓ ಎಸ್ ನಂ.256/2002 ರ ತೀರ್ಪಿನಲ್ಲಿ ನನ್ನ ಜೊತೆ ಎಲ್ಲಾ ನನ್ನ ಅಕ್ಕ-ತಂಗಿಯರಿಗೆ ಸಮಪಾಲು ಬಂದಿರುತ್ತದೆ. ನನ್ನ ತಮ್ಮನಿಗೂ ಸಹ ಭಾಗ ಬಂದಿರುತ್ತದೆ, ಒಟ್ಟು 4 ಭಾಗಗಳಲ್ಲಿ ಪಾಲು ಆಗಿರುತ್ತದೆ. ನನ್ನ ತಮ್ಮನ ಭಾಗಕ್ಕೆ ಬಂದ ಸ್ವತ್ತಿಗೆ ಅವರು ಈ ಪ್ರತಿವಾದಿಯರಿಗೆ ಕರಾರು ಮಾಡಿಕೊಟ್ಟಿರುತ್ತಾರೆಂದರೆ ಗೊತ್ತಿಲ್ಲ. ಸದರಿ ವಿಷಯ ನನಗೆ ಗೊತ್ತಿರುತ್ತದೆ ಹಾಗೂ ನಾನು ನನ್ನ ತಮ್ಮನ ಮಗನ ಜೊತೆ ನ್ಯಾಯಾಲಯಕ್ಕೂ ಸಹ ಬರುತ್ತೇನೆಂದರೆ ಸರಿಯಲ್ಲ.

ಎಫ ಡಿ ಪಿ ನಂ.7/2002 ಇದೆ ನ್ಯಾಯಾಲಯದಲ್ಲಿ ಹೂಡಿರುತ್ತೇನೆ ಹಾಗೂ ಅದು ಇನ್ನು ಇತ್ಯಾರ್ಥವಾಗಿಲ್ಲ ಎಂದರೆ ಸರಿ. ಸಂಪೂರ್ಣ ದಾವಾಸ್ವತ್ತಿಗೆ ನಾನು ದಾವೆಯನ್ನು ಹೂಡಿದ್ದು ಅದರಲ್ಲಿ ನನಗೆ ನನ್ನ ಭಾಗಕ್ಕೆ ಬಂದ ಸ್ವತ್ತಿಗೆ ಮಾತ್ರ ಹಕ್ಕು ಇರುತ್ತದೆ ಸಂಪೂರ್ಣ 10 ಎಕೆರ 4 ಗುಂಟೆ ಸ್ವತ್ತಿಗೆ ಹಕ್ಕು ಇರುವುದಿಲ್ಲವೆಂದರೆ ಸರಿಯಲ್ಲ. ದಾವಾಸ್ವತ್ತು ಈಗಲೂ ಸಹ ನನ್ನ ತಮ್ಮನ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿ. ದಾವಾಸ್ವತ್ತಿನ ಸ್ವಾ ಧೀನದಲ್ಲಿ ನನ್ನ ತಮ್ಮನ ಹಾಗೂ ಅವನ ಕುಟುಂಬದವರು ಸ್ವಾಧೀನದಲ್ಲಿ ಇದ್ದಾರೆಂದರೆ ನಾನೂ ಸಹ ಸ್ವಾ ಧೀನಲ್ಲಿ ಇರುತ್ತೇನೆ. ದಾವಾಸ್ವತ್ತಿನಲ್ಲಿ ನಾನು ಸ್ವಾಧೀನದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ.

ಮುನಿಸಿದ್ದಯ್ಯ ರವರು ಅವರ ಮಗಳಾದ ರುದ್ರಮ್ಮರವರಿಗೆ ದಾವಾಸ್ವತ್ತಿನಲ್ಲಿ ಒಟ್ಟು 30 ಗಂಟೆ ಜಾಗಕ್ಕೆ ದಾನಪತ್ರ ಮಾಡಿಕೊಟ್ಟಿದ್ದರು ಎಂದರೆ ಗೊತ್ತಿರುವುದಿಲ್ಲ. ಅದರ ಆಧಾರದ ಮೇಲೆ 1 ಹಾಗೂ 2 ನೇ ಪ್ರತಿವಾದಿಯವರು ಖಾತೆಯನ್ನು ಬದಲಾಯಿಸಿಕೊಂಡು ಸ್ವಾ ಧೀನದಲ್ಲಿ ಇರುತ್ತಾರೆಂದರೆ ಮೋಸದಿಂದ ಮಾಡಿಕೊಂಡಿರುತ್ತಾರೆ. ಅದಕ್ಕೆ ಸಂಬಂಧಿಸಿದಂತೆ ನಾನು ಅವರ ವಿರುದ್ದ ಈ ದಾವೆಯನ್ನು ಹೂಡಿರುತ್ತೇನೆ. ದಾನಪತ್ರವನ್ನು ಪ್ರಶ್ನಿಸಿ ನಾನು ಯಾವುದೇ ದಾವೆಯನ್ನು ಹೂಡಿರುವುದಿಲ್ಲ ಎಂದರೆ ಸರಿಯಲ್ಲ.

ಪ್ರತಿವಾದಿಯರು 2022 ರಿಂದ ನನಗೆ ತೊಂದರೆ ಕೊಡುತ್ತಿದ್ದರು. ಅದಕ್ಕೆ ಸಂಬಂಧಿಸಿದಂತೆ ಹಲವಾರು ಬಾರಿ ಪೊಲೀಸ್ ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇನೆ. ದೂರು ನೀಡಿದಕ್ಕೆ ಸಂಬಂಧಿಸಿದಂತೆ ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಪ್ರತಿವಾದಿಯರು ದಾವಾಸ್ವತ್ತಿಗೆ ಯಾವುದೇ ತೊಂದರೆಯನ್ನು ಕೊಟ್ಟಿರುವುದಿಲ್ಲ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು**.

**(ನನ್ನ ಉಕ್ತಲೇಖನ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,**
**ದೊಡ್ಡಬಳ್ಳಾಪುರ.**